# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, 10 ಜುಲೈ 2016, ಬೆಂಗಳೂರು, ಸಂಪುಟ 2, ಸಂಚಿಕೆ 3, ಪುಟಗಳು-4. ಸಂಪಾದಕರು : ಜಿ.ಟಿ.ಗೋವಿಂದಪ್ಪ
Kannada monthly, 10 May 2016, Bengaluru, Vol. 2, No.1, Pages-4, KARKAN24585/10/12 Editor: G.T. Govindappa.

ಚಂದ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.

## ಧಮ್ಮ ಪದಗಳು

ಅವಿರುದ್ಧಂ ವಿರುದ್ಧೇಸು,
ಅತ್ತದಂಡೇಸು ನಿಬ್ಬುತಂ;
ಸಾದಾನೇಸು ಅನಾದಾನಂ,
ತಮಹಂ ಬ್ರೂಮಿ ಬ್ರಾಹ್ಮಣಂ.

ಹಗೆತನವುಳ್ಳವರ ನಡುವೆ ಮೈತ್ರಿಯಿಂದಿರುವವನು, ಅಶಾಂತರ ನಡುವೆ ಶಾಂತತೆಯಿಂದಿರುವವನು, ಮತ್ತು ವ್ಯಾಮೋಹಿಗಳ ನಡುವೆ ನಿರ್ಮೋಹಿಯಾಗಿರುವವನು- ಅವನನ್ನು ನಾನು ಬ್ರಾಹ್ಮಣ ಎನ್ನುತ್ತೇನೆ.

**ಧಮ್ಮ ಪದ – 406**

# ನಾಲ್ಕು ವಿಧದ ಜನಗಳು

### ಎಸ್.ಎನ್. ಗೋಯಂಕ

(ಡಿಸೆಂಬರ್–2005 ರ 'ವಿಪಶ್ಯನ ಪತ್ರಿಕಾ' ದಲ್ಲಿ ಗೋಯಂಕಾಜಿಯವರು ಬರೆದ ಹಿಂದಿ ಲೇಖನವನ್ನು ಇಂಗ್ಲೀಷಿಗೆ ಅನುವಾದ ಮಾಡಿ ಮಾರ್ಪಾಡುಗಳೊಂದಿಗೆ ಜನವರಿ 13, 2006ರ ಇಂಗ್ಲೀಷ್ ವಿಪಶ್ಯನ ವಾರ್ತಾಪತ್ರದಲ್ಲಿ ಪ್ರಕಟಿಸಲಾಗಿದೆ. ಈ ಕೆಳಗಿನದನ್ನು ಇಂಗ್ಲೀಷ್‌ನಿಂದ ಅನುವಾದಿಸಲಾಗಿದೆ.)

"ಈ ಪ್ರಪಂಚದಲ್ಲಿ ನಾಲ್ಕು ಬಗೆಯ ಜನಗಳನ್ನು ನಾನು ಕಾಣುತ್ತೇನೆ", ಎಂದು ಬುದ್ಧ ಹೇಳಿದ. "ಮೊದಲನೆಯ ಬಗೆ, ಕತ್ತಲೆಯಿಂದ ಕತ್ತಲೆಯ ಕಡೆಗೆ ಓಡುತ್ತಿರುವವರು. ಎರಡನೆಯವರು, ಬೆಳಕಿನಿಂದ ಕತ್ತಲೆಯ ಕಡೆಗೆ ಓಡುತ್ತಿರುವವರು. ಮೂರನೆಯವರು, ಕತ್ತಲೆಯಿಂದ ಬೆಳಕಿನ ಕಡೆಗೆ ಓಡುತ್ತಿರುವವರು ಮತ್ತು ನಾಲ್ಕನೆಯವರು ಬೆಳಕಿನಿಂದ ಬೆಳಕಿನ ಕಡೆಗೆ ಓಡುತ್ತಿರುವವರು"

ಬುದ್ಧ ಒಗಟುಗಳಲ್ಲಿ ಮಾತನಾಡಲಿಲ್ಲ. ಅವನ ಬೋಧನೆಯು ಸ್ಪಷ್ಟವಾಗಿದೆ ಮತ್ತು ಚೆನ್ನಾಗಿ ವಿವರಿಸಲ್ಪಟ್ಟಿದೆ. ***ಸ್ವಾಕ್ಖಾತೋ ಭಗವತಾ ಧಮ್ಮೋ.*** ಜನಗಳು ಅರ್ಥ ಮಾಡಿಕೊಳ್ಳಲು ಕಷ್ಟವಾಗುವಂತಹದನ್ನು ಅವನು ಯಾವಾಗ ಹೇಳುತ್ತಿದ್ದನೋ ತಕ್ಷಣ ಅದನ್ನು ವಿವರಿಸುತ್ತಿದ್ದನು. ಕತ್ತಲು ಎಂದರೆ ಏನು? ಬೆಳಕು ಎಂದರೆ ಏನು? ಒಂದರಿಂದ ಇನ್ನೊಂದಕ್ಕೆ ವ್ಯಕ್ತಿಯು ಯಾವಾಗ ಓಡುತ್ತಿರುತ್ತಾನೆ?

**1. ಕತ್ತಲಿನಿಂದ ಕತ್ತಲೆಗೆ:**

ಎಲ್ಲಾ ಕಡೆಯಿಂದಲೂ ಕತ್ತಲೆಯಿದೆ. ಕಷ್ಟದ ಜೀವನ, ದುಃಖದ ಜೀವನ. ವಿವಿಧ ರೀತಿಯಲ್ಲಿ ವ್ಯಕ್ತಿಯು ನೋವನ್ನು ಅನುಭವಿಸುತ್ತಿದ್ದಾನೆ– ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಮತ್ತು ಕುಟುಂಬದಲ್ಲಿನ ಅಥವಾ ಸಮಾಜದಲ್ಲಿನ ತೊಂದರೆಗಳ ಕಾರಣದಿಂದ. ಸಂತೋಷ ಎಂಬುದು ಇಲ್ಲವೇ ಇಲ್ಲ. ಆದರೂ ಒಳಗೆ ಜ್ಞಾನದ ಲವಲೇಶವೂ ಇಲ್ಲ. ಪ್ರತಿ ಕ್ಷಣವೂ ಕೋಪ, ದ್ವೇಷ, ದುರ್ಭಾವನೆಗಳನ್ನು ಈ ವ್ಯಕ್ತಿ ಉತ್ಪತ್ತಿ ಮಾಡಿಕೊಳ್ಳುತ್ತಿರುತ್ತಾನೆ:

"ಈ ವ್ಯಕ್ತಿಯ ದೆಸೆಯಿಂದ, ಈ ಘಟನೆಯ ಕಾರಣದಿಂದ, ಈ ಕಾರಣದ ದೆಸೆಯಿಂದ, ನಾನು ನೋವನ್ನು ಅನುಭವಿಸುತ್ತಿದ್ದೇನೆ"ಎಂದು ಚಿಂತಿಸುತ್ತಾ ಆ ವ್ಯಕ್ತಿಯ ಬಗ್ಗೆ ಅಥವಾ ಕಾರಣದ ಬಗ್ಗೆ ಇವರು ದ್ವೇಷ ಬೆಳೆಸಿಕೊಳ್ಳುತ್ತಾರೆ. ಈ ದುಃಖ, ದ್ವೇಷ ಹಳೆಯ ***ಕಮ್ಮ***ಗಳ ಫಲವಾಗಿದೆ. ಮತ್ತೆ ಈಗ, ವ್ಯಕ್ತಿಯು ಇನ್ನೂ ಹೆಚ್ಚಿನ ದ್ವೇಷದ ಬೀಜಗಳನ್ನು ಬಿತ್ತುತ್ತಿದ್ದಾನೆ. ಈಗಾಗಲೇ ವ್ಯಕ್ತಿಯ ಜೀವನದಲ್ಲಿ ಬಹಳಷ್ಟು ಕತ್ತಲೆಯಿದೆ ಮತ್ತು ಅವನು ಇನ್ನೂ ಹೆಚ್ಚು ಕತ್ತಲೆಯ ಬೀಜಗಳನ್ನು ನೆಡುತ್ತಿದ್ದಾನೆ. ಕೋಪದ, ದ್ವೇಷದ, ದುರ್ಭಾವನೆಯ ಈ ಬೀಜಗಳು ಮುಂದೆಯೂ ದುಃಖವನ್ನಲ್ಲದೆ ಬೇರೇನನ್ನೂ ತರುವುದಿಲ್ಲ. ಆಗ ಭವಿಷ್ಯವೂ ದುಃಖದಿಂದ ತುಂಬಿರುತ್ತದೆ. ಈಗಲೂ ದುಃಖ, ಮುಂದೆಯೂ ದುಃಖ. ಈಗಲೂ ಕತ್ತಲು, ಮುಂದೆಯೂ ಕತ್ತಲು. ಅಂತಹ ವ್ಯಕ್ತಿಯು ಕತ್ತಲೆಯಿಂದ ಕತ್ತಲೆಗೆ ಓಡುತ್ತಿದ್ದಾನೆ.

**2. ಬೆಳಕಿನಿಂದ ಕತ್ತಲೆಯ ಕಡೆಗೆ:**

ಎಲ್ಲಾ ರೀತಿಯಲ್ಲೂ ವ್ಯಕ್ತಿಯ ಜೀವನದಲ್ಲಿ ಬೆಳಕಿದೆ. ಪ್ರಾಪಂಚಿಕ ಸಂಪತ್ತು, ಒಳ್ಳೆಯ ಆರೋಗ್ಯ ಮತ್ತು ಸಮಾಜದಲ್ಲಿ ಗೌರವವಿರುವುದರಿಂದ ಇಂದು ಸಂತೋಷವಿದೆ. ಆದರೆ ತನ್ನಲ್ಲಿ ಬುದ್ಧಿಯಿಲ್ಲ. ಈ ಅಧಿಕಾರ, ಅಂತಸ್ತು, ಸಂಪತ್ತಿನ ಕಾರಣದಿಂದ ವ್ಯಕ್ತಿಯು ದುರಹಂಕಾರಿಯಾಗುತ್ತಾನೆ ಮತ್ತು ಇತರರ ಬಗ್ಗೆ ತಿರಸ್ಕಾರ ಹೊಂದಿದ್ದಾನೆ.

"ಈ ನಿರ್ಗತಿಕ ಜನರು ನಿಷ್ಪ್ರಯೋಜಕರು. ನಾನು ಎಷ್ಟೊಂದು ಬುದ್ಧಿವಂತ; ನಾನು ಎಷ್ಟೊಂದು ಹಣ, ಅಧಿಕಾರ, ಸ್ಥಾನ, ಅಂತಸ್ತು ಹೊಂದಿದ್ದೇನೆ," ಎಂದು ಯೋಚಿಸುತ್ತಾನೆ.

ಹಿಂದಿನ ಕೆಲವು ಒಳ್ಳೆಯ ***ಕಮ್ಮ*** (ಕೆಲಸ) ಗಳ ಕಾರಣದಿಂದ ಎಲ್ಲಾ ರೀತಿಯಿಂದಲೂ ಬೆಳಕಿದೆ. ಈಗ ಅಥವಾ ಮುಂದೆ ಇದು ಕೊನೆಗಾಣುತ್ತದೆ. ಆದರೆ ಪ್ರತಿ ಕ್ಷಣವೂ ಜಂಬದ ಬೀಜಗಳನ್ನು, ದ್ವೇಷದ ಬೀಜಗಳನ್ನು, ದುಃಖದ ಬೀಜಗಳನ್ನು, ಕತ್ತಲೆಯ ಬೀಜಗಳನ್ನು ವ್ಯಕ್ತಿಯು ಬಿತ್ತುತ್ತಿದ್ದಾನೆ. ಈ ನಕಾರಾತ್ಮಕತೆಯ ಬೀಜಗಳು ಮುಂದೆ ಕತ್ತಲೆಯ, ದುಃಖದ ಫಲವನ್ನು ನೀಡುತ್ತವೆ. ಹೀಗೆ, ಈ ವ್ಯಕ್ತಿಯು ಬೆಳಕಿನಿಂದ ಕತ್ತಲೆಯ ಕಡೆಗೆ ಓಡುತ್ತಿದ್ದಾನೆ.

**3. ಕತ್ತಲೆಯಿಂದ ಬೆಳಕಿನ ಕಡೆಗೆ:**

ಮೂರನೇ ಬಗೆಯ ವ್ಯಕ್ತಿಯು ಮೊದಲನೇ ಗುಂಪಿನ ವ್ಯಕ್ತಿಯ ಸ್ಥಾನದಲ್ಲಿಯೇ ಇದ್ದಾನೆ. ಎಲ್ಲಾ ರೀತಿಯಿಂದಲೂ ಕಷ್ಟಗಳಿವೆ. ಈಗಿನ ಜೀವನದಲ್ಲಿ ಎಲ್ಲೆಲ್ಲೂ ಕತ್ತಲೆಯಿದೆ. ಆದರೆ, ತನ್ನೊಳಗೆ ಜ್ಞಾನವಿದೆ. ಯಾವಾಗಲೂ ನಗುಮುಖದಿಂದಿರುತ್ತಾನೆ.

"ಓ, ಹಿಂದಿನ ನನ್ನ ಕೆಟ್ಟ ***ಕಮ್ಮ***ದ ಕಾರಣದಿಂದ ಈ ಕಷ್ಟ ಬಂದಿದೆ. ಯಾರೋ ಒಬ್ಬರು ನನ್ನ ದುಃಖಕ್ಕೆ ಕಾರಣರಾದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಖಂಡಿತವಾಗಿ ಈ ವ್ಯಕ್ತಿ ನನ್ನ ದುಃಖದ ನಿಜವಾದ ಕಾರಣವಲ್ಲ. ಈ ವ್ಯಕ್ತಿ ಕೇವಲ ನನ್ನ ದುಃಖದ ಮಾಧ್ಯಮವಾಗಿದ್ದಾನೆ. ಈ ಕೆಟ್ಟ ಕೆಲಸಗಳ ಕಾರಣದಿಂದ ಅವನು ಅಥವಾ ಅವಳು ತೊಂದರೆ ಅನುಭವಿಸದಿರಲಿ! ಹಿಂದಿನ ನನ್ನ ***ಕಮ್ಮ***ದ ಕಾರಣದಿಂದ ಈ ವ್ಯಕ್ತಿಯ ಮುಖಾಂತರ ಅಥವಾ ಇನ್ನೊಬ್ಬ ವ್ಯಕ್ತಿಯ ಮುಖಾಂತರ ಈ ಕಷ್ಟ ಬಂದೇ ಬರುತ್ತಿತ್ತು. ಈಗ ನಾನು ದುಃಖದ ಹೊಸ ಬೀಜವನ್ನು ನೆಡುವುದಿಲ್ಲ.

ಆದ್ದರಿಂದ ಅಂತಹ ವ್ಯಕ್ತಿಯ ಬಗ್ಗೆ ಇವನು ಪ್ರೀತಿ ಮತ್ತು ಕರುಣೆಯನ್ನು ಉತ್ಪತ್ತಿ ಮಾಡಿಕೊಳ್ಳುತ್ತಾನೆ. ವ್ಯಕ್ತಿಯು ಪ್ರೀತಿಯ, ಕರುಣೆಯ ಬೀಜಗಳನ್ನು ನೆಡುತ್ತಾನೆ. ಈಗ ಕತ್ತಲೆಯಿದೆ, ಆದರೆ ಭವಿಷ್ಯವು ಬೆಳಕಿನಿಂದ ತುಂಬಿದೆ. ಇಂದೋ ಅಥವಾ ಮುಂದೋ ಈ ಕತ್ತಲೆ ಹೊರಟು ಹೋಗುತ್ತದೆ. ಆಗ

ಅಲ್ಲಿ ಬೆಳಕು ಮಾತ್ರ ಇರುತ್ತದೆ. ವ್ಯಕ್ತಿಯು ಬೆಳಕಿನ ಬೀಜಗಳನ್ನು ಬಿತ್ತುತ್ತಿದ್ದಾನೆ. ಅದು ಭವಿಷ್ಯದಲ್ಲಿ ಬೆಳಕನ್ನು, ಸಂತೋಷವನ್ನು ತರುತ್ತದೆ.

**4. ಬೆಳಕಿನಿಂದ ಬೆಳಕಿನ ಕಡೆಗೆ:**

ಈಗ ವ್ಯಕ್ತಿಯ ಜೀವನ ಬೆಳಕಿನಿಂದ, ಸಂತೋಷದಿಂದ ತುಂಬಿದೆ. ಪ್ರಾಪಂಚಿಕ ಸಂಪತ್ತಿನ, ಎಲ್ಲಾ ಪ್ರಾಪಂಚಿಕ ಸುಖ ಸಾಧನಗಳ, ಸಮಾಜದಲ್ಲಿ ಘನತೆಯ ಸಂತೋಷನ್ನು ವ್ಯಕ್ತಿಯು ಅನುಭವಿಸುತ್ತಾನೆ. ಆದರೆ ಅಲ್ಲಿ ಜ್ಞಾನವಿದೆ ಮತ್ತು ವ್ಯಕ್ತಿಯು ಈ ರೀತಿ ತಿಳಿಯುತ್ತಿರುತ್ತಾನೆ:

"ಹಿಂದಿನ ಒಳ್ಳೆಯ ***ಕಮ್ಮ***ಗಳ ಕಾರಣದಿಂದ ಈ ಎಲ್ಲಾ ಯಶಸ್ಸು ಲಭಿಸಿದೆ. ಮತ್ತು ನಾನು ಏನೇ ಒಳ್ಳೆಯ ***ಕಮ್ಮ*** ಮಾಡಿದ್ದರೂ ಅವು ಶಾಶ್ವತವಲ್ಲ. ಅವುಗಳ ಫಲವೂ ಶಾಶ್ವತವಲ್ಲ. ಈಗಲೋ ಅಥವಾ ನಂತರವೋ ಅದು ಅಂತ್ಯವಾಗುತ್ತದೆ. ಆದ್ದರಿಂದ ಈಗ ನಾನು ಹೊಂದಿರುವ ಹಣ, ಸ್ಥಾನ, ಅಧಿಕಾರ, ಅಂತಸ್ತು ಎಲ್ಲವನ್ನೂ ಇತರರ ಒಳ್ಳೆಯದಕ್ಕಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ನಾನು ಒಬ್ಬ ಕುಟುಂಬಸ್ಥನಾಗಿರುವುದರಿಂದ ನನ್ನ ಸಂಪತ್ತನ್ನು ಕುಟುಂಬ ನಿರ್ವಹಣೆಗಾಗಿ ಮತ್ತು ನನ್ನ ಮೇಲೆ ಅವಲಂಬಿತರಾಗಿರುವವರಿಗಾಗಿ ವ್ಯಯ ಮಾಡಬೇಕಾದದ್ದು ನನ್ನ ಕರ್ತವ್ಯ. ಏನು ಉಳಿಯುತ್ತದೋ ಅದನ್ನು ಇತರರ ಒಳಿತಿಗಾಗಿ, ಇತರರ ಪ್ರಯೋಜನಕ್ಕಾಗಿ ನಾನು ಉಪಯೋಗಿಸಬೇಕು. ಹೆಚ್ಚು ಹೆಚ್ಚು ಜನರು ಪರಿಶುದ್ಧ ಧಮ್ಮವನ್ನು ಪಡೆಯಲಿ! ಹೆಚ್ಚು ಹೆಚ್ಚು ಜನರು ಅನುಭವ ಜ್ಞಾನವನ್ನು ಬೆಳೆಸಿಕೊಳ್ಳಲಿ! ಹೆಚ್ಚು ಹೆಚ್ಚು ಜನರು ತಮ್ಮ ದುಃಖದಿಂದ ಹೊರ ಬರಲಿ."

ಆದ್ದರಿಂದ, ಪ್ರೀತಿ, ಕರುಣೆ ಮತ್ತು ಸದ್ಭಾವನೆಯನ್ನು ವ್ಯಕ್ತಿಯು ಎಲ್ಲಾ ಸಮಯದಲ್ಲೂ ಉತ್ಪತ್ತಿ ಮಾಡುತ್ತಾನೆ. ವಾಚಿಕ, ದೈಹಿಕ ಮತ್ತು ಮಾನಸಿಕ ಎಲ್ಲಾ ಕ್ರಿಯೆಗಳೂ ಇತರರ ಒಳಿತಿಗಾಗಿ ಇರುತ್ತವೆ. ವ್ಯಕ್ತಿಯು ಬೆಳಕಿನ ಬೀಜಗಳನ್ನು ಬಿತ್ತುತ್ತಾನೆ. ವ್ಯಕ್ತಿಯು ಸಂತೋಷದಿಂದ ಸಂತೋಷದ ಕಡೆಗೆ ಓಡುತ್ತಿರುತ್ತಾನೆ. ಬೆಳಕಿನಿಂದ ಬೆಳಕಿನ ಕಡೆಗೆ ವ್ಯಕ್ತಿಯು ಓಡುತ್ತಿರುತ್ತಾನೆ.

ಮೊದಲನೇ ಅಥವಾ ಎರಡನೇ ಗುಂಪಿನ ಜನಗಳ ತರಹ ನಾವು ಇರಬಾರದು. ಮೂರು ಅಥವಾ ನಾಲ್ಕನೇ ಗುಂಪಿನ ಜನಗಳ ತರಹ ನಾವು ಇರಬೇಕು. ಮೂರನೆಯದೋ ಅಥವಾ ನಾಲ್ಕನೆಯದೋ, ಇದು ನಮ್ಮ ನಿಯಂತ್ರಣದಲ್ಲಿಲ್ಲ. ಕೆಲವು ವೇಳೆ ಹಿಂದಿನ ***ಕಮ್ಮ***ಗಳ ದೆಸೆಯಿಂದ ಜೀವನ ಕತ್ತಲೆಯಿಂದ, ದುಃಖದಿಂದ ತುಂಬಿರಬಹುದು. ಇತರೆ ಸಮಯದಲ್ಲಿ, ಹಿಂದಿನ ***ಕಮ್ಮ***ಗಳ ದೆಸೆಯಿಂದ ಜೀವನ ಬೆಳಕಿನಿಂದ ತುಂಬಿರಬಹುದು. ಹಿಂದಿನ ಒಳ್ಳೆಯ ಮತ್ತು ಕೆಟ್ಟ ***ಕಮ್ಮ***ಗಳ ಫಲಗಳಿಂದಾಗಿ ಜೀವನದಲ್ಲಿ ಸಂತೋಷ ಅಥವಾ ಅಸಂತೋಷ ಇರುತ್ತದೆ. ಸಂತೋಷವಿದೆಯೋ ಅಥವಾ ದುಃಖ ಇದೆಯೋ; ಬೆಳಕಿದೆಯೋ ಅಥವಾ ಕತ್ತಲೆಯಿದೆಯೋ, ನಾವು ನಮ್ಮೊಳಗೆ ಬೆಳಕನ್ನು ವೃದ್ಧಿಸಿಕೊಳ್ಳೋಣ. ಭವಿಷ್ಯದಲ್ಲಿ ನೋವುಂಟು ಮಾಡುವಂತಹ, ಕತ್ತಲೆಯನ್ನು ಉಂಟು ಮಾಡುವಂತಹ, ಹೊಸ ***ಸಂಖಾರ***ಗಳನ್ನು ನಾವು ಮಾಡಕೂಡದು. ಇದನ್ನೇ ನಾವು ವಿಪಶ್ಯನದಿಂದ ಕಲಿಯುವುದು.

ಬುದ್ಧ ಹೇಳಿದ:

***ಅತ್ತಾ ಹಿ ಅತ್ತನೋ ನಾಥೋ, ಅತ್ತಾ ಹಿ ಅತ್ತನೋ ಗತಿ.***

ಅಂದರೆ, ನಿನಗೆ ನೀನೇ ಒಡೆಯ. ನಿನಗೆ ನೀನೆ ಗತಿ.

ಪ್ರಸ್ತುತ, ಹಿಂದಿನದರ ಮಗುವಲ್ಲದೆ ಬೇರೇನೂ ಅಲ್ಲ. ಹಿಂದೆ ನೀವು ಏನು ಮಾಡಿದ್ದೀರೋ, ಅದನ್ನು ಮಾಡಿ ಆಗಿದೆ. ಆದರೆ ನೀವು ಪ್ರಸ್ತುತದ ಒಡೆಯರು. ನಿಮಗೆ ದುಃಖ ತರುವಂತಹ ಒಂದೇ ಒಂದು **ಸಂಖಾರ**ವನ್ನೂ ಉತ್ಪತ್ತಿ ಮಾಡದೇ ಇರಲು ಪ್ರಯತ್ನಿಸಿ. ಭವಿಷ್ಯವು ವರ್ತಮಾನದ ಮಗು. ಪ್ರಸ್ತುತದ ಒಡೆಯರಾಗಿ. ನಿಮ್ಮ ಪ್ರಸ್ತುತವು ಧಮ್ಮದಿಂದ ತುಂಬಿರಲಿ. ಆಗ, ಮುಂದಿನದು ತಾನೇ ತಾನಾಗಿ ಸಂತೋಷದಿಂದ ತುಂಬಿರುತ್ತದೆ. ನಿಮ್ಮ ಜೀವನದಲ್ಲಿ ಮುಂದೆ ಕತ್ತಲೆಯಿರುವುದಿಲ್ಲ.

ಪ್ರಸ್ತುತ ಕ್ಷಣದ ಮೇಲೆ ಪ್ರಭುತ್ವ ಸಾಧಿಸಿ. ಇದೇ ವಿಪಶ್ಯನ. ಸಾಧನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ ಮತ್ತು ಸಾಧನೆಯಲ್ಲಿ ಸ್ಥಾಪಿತಗೊಳ್ಳಿ. ನೀವು ಸಂವೇದನೆಗಳನ್ನು ಅರಿಯಬೇಕು ಮತ್ತು ಸಂವೇದನೆಗಳಿಗೆ ಸಮತೆಯಿಂದಿರಬೇಕು. ಉಳಿದದ್ದನ್ನು ಧಮ್ಮಕ್ಕೆ ಬಿಡಿ. ಫಲಿತಾಂಶಗಳು ಒಳ್ಳೆಯವೇ ಆಗಿರುತ್ತವೆ. ಧಮ್ಮದಲ್ಲಿ ಬೆಳೆಯುತ್ತಿರಿ, ಧಮ್ಮದಲ್ಲಿ ಬೆಳೆಯುತ್ತಿರಿ. ಧಮ್ಮವು ಎಷ್ಟೊಂದು ಅಗಾಧವಾಗಿದೆ, ಎಷ್ಟೊಂದು ಅದ್ಭುತವಾಗಿದೆ!

ನೀವೆಲ್ಲರೂ ಧಮ್ಮದ ಉತ್ತಮ ಫಲಗಳನ್ನು ಪಡೆಯಿರಿ! ನೀವೆಲ್ಲರೂ ನಿಜ ಸಂತೋಷವನ್ನು, ನಿಜ ಶಾಂತಿಯನ್ನು, ನಿಜ ಸಾಮರಸ್ಯವನ್ನು ಅನುಭವಿಸಿ.

***ಭವತು ಸಬ್ಬ ಮಂಗಳಂ*** – ಸಕಲ ಜೀವಿಗಳೂ ಸಂತೋಷವಾಗಿರಲಿ.

––––*–––*––––*–––

## ಧಮ್ಮ ಪಫುಲ್ಲ : ಅಂದು, ಇಂದು ಮತ್ತು ಮುಂದೆ.

ಪ್ರೀತಿಯ ಸಾಧಕ/ಸಾಧಕಿಯರೇ,

ಬೆಂಗಳೂರಿನ ವಿಪಶ್ಯನ ಧ್ಯಾನ ಕೇಂದ್ರವಾದ ಧಮ್ಮ ಪಫುಲ್ಲವು ಧರ್ಮ ವನದಲ್ಲಿ ಅರಳುತ್ತಿರುವ ಪುಷ್ಪವಾಗಿದೆ. ಪೂಜ್ಯ ಗುರುಗಳಾದ ಶ್ರೀ ಎಸ್.ಎನ್. ಗೋಯಂಕಾಜಿಯವರ ಪ್ರಪಂಚದ ಎಲ್ಲ ಕಡೆ ಬಿತ್ತಿ ಬೆಳೆಸಿದ ಪುಷ್ಪಗಳಲ್ಲಿ ಧಮ್ಮ ಪಫುಲ್ಲವು ಒಂದಾಗಿದೆ.

1985 ರಲ್ಲಿ ಪೂಜ್ಯ ಗುರೂಜಿಯವರು ಸಾರ್ವಜನಿಕ ಪ್ರವಚನಗಳನ್ನು ನೀಡಲು ಬೆಂಗಳೂರಿಗೆ ಬಂದಾಗ ಧರ್ಮ ಬೀಜಗಳು ಬಿತ್ತಲ್ಪಟ್ಟವು. 1988 ರಲ್ಲಿ ಮೊದಲನೆ ಜಿಪ್ಸಿ ಶಿಬಿರ ಆಯೋಜಿಸುವುದರ ಮೂಲಕ ಧರ್ಮದ ಬೇರುಗಳು ಗಟ್ಟಿಯಾಗಿ ನೆಲೆಗೊಳ್ಳಲು ಪ್ರಾರಂಬಿಸಿದವು. ಅಂದಿನಿಂದ 2005 ರ ವರೆಗೆ ಸುಮಾರು 150 ಶಿಬಿರಗಳು ಗಂಗಾ ಫಾರ್ಮ್, ಮಹಾಬೋಧಿ ಸೊಸೈಟಿ, ಜ್ಞಾನ ವಿಜ್ಞಾನ ವಿದ್ಯಾಪೀಠ, ಸೂರ್ಯ ಫೌಂಡೇಷನ್ ಮತ್ತು ಅನೇಕ ಛತ್ರಗಳಲ್ಲಿ ನಡೆದು ಈ ಪ್ರದೇಶದಲ್ಲಿ ಧರ್ಮವು ಆಳವಾಗಿ ಬೇರೂರಲು ಸಹಾಯವಾದವು. ಇಲ್ಲಿಯವರೆಗೆ 20,000 ಕ್ಕಿಂತಲೂ ಹೆಚ್ಚು ಸಾಧಕರು ಬೆಂಗಳೂರಿನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

2005 ರಲ್ಲಿ ಪ್ರಾರಂಭವಾದ ಧಮ್ಮ ಪಫುಲ್ಲವನ್ನು ನೋಡಿರುವ ಹಿಂದಿನ ಸಾಧಕರು ತಿಂಗಳುಗಳು ಮತ್ತು ವರ್ಷಗಳನ್ನು ಸಂತೋಷದಿಂದ ನೆನಪಿಸಿಕೊಳ್ಳುತ್ತಾರೆ. ಸುಮಾರು 50 ಸಾಧಕರಿಗೆ ಸ್ಥಳಾವಕಾಶ ನೀಡಬಲ್ಲ ತಡಿಕೆ ಮೇಲ್ಛಾವಣಿಯ ಧ್ಯಾನಮಂದಿರದಿಂದ ಶಿಬಿರಗಳು ಪ್ರಾರಂಭವಾದವು. ನಂತರ ಪುರುಷ ಮತ್ತು ಮಹಿಳೆಯರಿಗೆ ನಿವಾಸ ಸ್ಥಾನಗಳನ್ನು ಮಿನಿ ಧ್ಯಾನಮಂದಿರಗಳ ಸಹಿತಿ ನಿರ್ಮಿಸಲಾಯಿತು. ನಂತರ ನಿರ್ಮಾಣವಾದದ್ದು ಸುಮಾರು 120 ಸಾಧಕರು ಧ್ಯಾನ ಮಾಡಲು ಅನುಕೂಲವಾಗುವಂತಹ ಧ್ಯಾನ ಮಂದಿರ.

ಮಹಿಳೆಯರಿಗಾಗಿ ಒಂದುಕೊಠಡಿಯಲ್ಲಿ ಇಬ್ಬರೇ ಇರುವಂತಹ ನಿವಾಸ ಸ್ಥಾನಗಳು ನಂತರ ನಿರ್ಮಿಸಲ್ಪಟ್ಟು ಇವು ಅವರಿಗೆ ಹೆಚ್ಚು ಅನುಕೂಲಕರವಾದವು. ಒಂದು ಹಂತಕ್ಕೆ 20 ಕೊಠಡಿಗಳಂತೆ ಎರಡು ಹಂತಗಳಲ್ಲಿ ಪುರುಷರಿಗೆ ಒಬ್ಬರೇ ಇರುವಂತ 40 ಕೊಠಡಿಗಳು ನಿರ್ಮಾಣವಾದವು. ನಂತರ ಧಮ್ಮ ಸೇವಕ ಮತ್ತು ಮ್ಯಾನೇಜರ್ ವಾಸಿಸಲು ಎರಡು ಕೊಠಡಿಗಳ ನಿವಾಸ ಸ್ಥಾನ ರಚನೆಯಾಯಿತು. ಮಹಿಳೆಯರ ಹಳೆಯ ನಿವಾಸ ಸ್ಥಾನವನ್ನು ಎರಡಾಗಿ ವಿಭಾಗಿಸಿ ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ನವೀಕರಿಸಲಾದ ಊಟದ ಹಾಲ್ ಗಳನ್ನು ನಿರ್ಮಿಸಲಾಗಿದೆ. ಪ್ರಾರಂಭದ ದಿನ ಸೇರಿದಂತೆ ಹಲವು ಬೇರೆ ಬೇರೆ ಧರ್ಮ ಚಟುವಟಿಕೆಗಳಿಗಾಗಿ ಅತ್ಯಂತ ಅಗತ್ಯವಾಗಿದ್ದಂತಹ ಬಹು ಉಪಯೋಗಿ ಸಮುಚ್ಛಯವನ್ನು ಊಟದ ಕೊಠಡಿಗಳ ಪಕ್ಕದಲ್ಲಿ ನಿರ್ಮಿಸಲಾಗಿದೆ.

ಕೇವಲ ಕಟ್ಟಡಗಳು ಮಾತ್ರವಲ್ಲ, ಸಾಕಷ್ಟು ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜನ್ನು ವ್ಯವಸ್ಥೆಗೊಳಿಸಲಾಯಿತು. ಕೊಳವೆ ಬಾವಿಗಳನ್ನು ಕೊರೆಸಲಾಯಿತು. ಪ್ರತಿಯೊಂದು ಕಟ್ಟಡದೊಡನೆ ಮಳೆ ನೀರು ಸಂಗ್ರಹಿಸಲಾಯಿತು. ಕಟ್ಟಡಗಳ ಮೇಲ್ಛಾವಣೆಗಳಲ್ಲಿ ಸೌರಶಕ್ತಿಯ ವಿದ್ಯುತ್ತಿನಿಂದ ನೀರನ್ನು ಕಾಯಿಸಲಾಗುತ್ತಿದ್ದು ನೀರನ್ನು ಸಂಗ್ರಹಿಸಲು ಒಂದು ದೊಡ್ಡ ಸಂಪ್ ಅನ್ನು ನಿರ್ಮಿಸಲಾಗಿದೆ. ಉಪಯೋಗಿಸಿದ ನೀರನ್ನು ಶುದ್ಧೀಕರಿಸಿ ಅದನ್ನು ಗಿಡಗಳಿಗೆ ಹಾಯಿಸಲು ಯಂತ್ರವನ್ನು ಸಜ್ಜುಗೊಳಿಸಲಾಗಿದೆ. ಕೇಂದ್ರದಲ್ಲಿನ ಹಳೆಯ ಬಾವಿಯನ್ನು ನವೀಕರಿಸಿ

ಸುಮಾರು 9 ಲಕ್ಷ ಲೀಟರ್ ನಷ್ಟು ನೀರನ್ನು ಸಂಗ್ರಹಿಸುವ ಏರ್ಪಾಡು ಮಾಡಲಾಗುತ್ತಿದೆ. ಅನೇಕ ಕಡೆ ಸಾಮಾನ್ಯ ವಿದ್ಯುತ್ ಬಲ್ಬ್‌ಗಳ ಬದಲಾಗಿ ಎಲ್ ಇ ಡಿ ಬಲ್ಬ್ ಗಳನ್ನು ಬಳಸಿ ಇದಕ್ಕೆ ಸೌರಶಕ್ತಿಯ ವಿದ್ಯುತ್ತನ್ನು ಒದಗಿಸಲಾಗುತ್ತಿದೆ. ಕೇಂದ್ರದ ನೆಲ ಕ್ರಮೇಣ ಹಸಿರಿನಿಂದ ಕೂಡಿದ್ದು ಇದನ್ನು ಇನ್ನು ಹೆಚ್ಚು ಮಾಡುವ ಅಗತ್ಯವಿದೆ.

ಈ ರೀತಿಯಾಗಿ ಕಳೆದ ಒಂದು ದಶಕದಿಂದ ಕೇಂದ್ರವು ಹನಿ ಹನಿಯಾಗಿ, ಎಸಳು ಎಸಳಾಗಿ, ಸಾವದಾನವಾಗಿ ಮತ್ತು ಸ್ಥಿರವಾಗಿ ಬೆಳೆದು ಪ್ರಪಂಚದ ಎಲ್ಲಾ ಭಾಗಗಳಿಂದ ಹಳೆಯ ಮತ್ತು ಹೊಸ ಧ್ಯಾನಾರ್ಥಿಗಳು ಬಂದು ಪರಿಶುದ್ಧ ಧಮ್ಮದ ಅಮೃತವನ್ನು ಸವಿಯಲು ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಲು ಶಕ್ತವಾಗಿದೆ. ಧಮ್ಮ ಪಫುಲ್ಲ ಕೇಂದ್ರದಲ್ಲಿ ಸದ್ಯಕ್ಕೆ ತಿಂಗಳಲ್ಲಿ ಎರಡು 10–ದಿನಗಳ ಶಿಬಿರಗಳು ನಡೆಯುತ್ತಿದ್ದು ಇಡೀ ವರ್ಷ ಕೇಂದ್ರವು ಸಾಧಕ/ಸಾಧಕಿಯರಿಂದ ತುಂಬಿರುತ್ತದೆ. ಸತಿಪಟ್ಠಾನ ಮತ್ತು 3 ದಿನಗಳ ಶಿಬಿರಗಳೂ ಆಗಾಗ್ಗೆ ನಿಯಮಿತವಾಗಿ ನಡೆಯುತ್ತಿವೆ.

ಧರ್ಮ ರಸವನ್ನು ಸವಿದ ಪ್ರತಿ ಸಾಧಕನೂ ಇದನ್ನು ತನ್ನ ಸಹೋದರರಲ್ಲಿ ಹಂಚಿಕೊಳ್ಳುವ ಭಾವನೆಯನ್ನು ಪಡೆದುಕೊಳ್ಳುತ್ತಾನೆ. ಈ ಭಾವನೆಯು ತಾವು ಕೇಂದ್ರಕ್ಕೆ ಮಾಡುವ ನಿಸ್ವಾರ್ಥ ಸೇವೆಯಿಂದ ಪ್ರಕಟಗೊಳ್ಳುತ್ತಿದೆ. ಇದರಿಂದಾಗಿಯೇ ಈ ಕೇಂದ್ರವು ಇಂದು ಇಷ್ಟು ಬೆಳೆದಿದೆ. ಒಂದು ವಿಪಶ್ಯನ ಶಿಬಿರ ಮುಗಿಸಿದ ಪ್ರತಿಯೊಬ್ಬ ಹೊಸ ಸಾಧಕನೂ ತನ್ನ ಜೀವನವನ್ನು ಸುಖಮಯ ಮತ್ತು ಸಾಮರಸ್ಯದಿಂದ ಕೂಡಿದ ಜೀವನವನ್ನಾಗಿ ಮಾಡಿಕೊಳ್ಳಲು ಕಲಿತು ಈಗಾಗಲೆ ಹಳೆಯ ಸಾಧಕರು ತಮ್ಮ ಪಾರಮಿಗಳಿಂದ ಈ ಕೇಂದ್ರವನ್ನು ಈ ಹಂತಕ್ಕೆ ತಂದಿರುವ ಶ್ರೇಷ್ಠ ಕೆಲಸಕ್ಕೆ ತಾನೂ ತನ್ನ ಪಾರಮಿಗಳನ್ನು ಸೇರಿಸುತ್ತಾನೆ. "ಏನು ನೀಡಲ್ಪಡುತ್ತದೆಯೋ ಅದು ಪುನಃ ಹಿಂತಿರುಗಿ ಬರುತ್ತದೆ" ಎಂಬ ಮಾತು ಎಷ್ಟೊಂದು ಅದ್ಭುತವಾಗಿದೆ!

ಧರ್ಮ ಕ್ಷೇತ್ರಕ್ಕೆ ಬರುವ ಪ್ರತಿ ಸಾಧಕನಿಗೂ ಶಿಬಿರದಲ್ಲಿ ಆಳವಾಗಿ ಕೆಲಸ ಮಾಡಿ ತನ್ನ ಕೆಲಸ ಮತ್ತು ಸಮಯದ ಹೂಡಿಕೆಯಿಂದ ಗರಿಷ್ಠ ಪ್ರಮಾಣದ ಲಾಭವನ್ನು ಪಡೆದುಕೊಂಡು ಹೋಗಲು ಆತನಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಬೇಕೆಂಬುದು ಪೂಜ್ಯ ಗುರೂಜಿಯವರ ಆಕಾಂಕ್ಷೆಯಾಗಿತ್ತು .ಪೂಜ್ಯ ಗುರುಜಿಯುವರ ಅಪೇಕ್ಷೆಯಂತೆ ಈ ಕೇಂದ್ರವನ್ನು ಬೆಳೆಸುವುದು ಹೇಗೆ? ಬೆಂಗಳೂರಿನಲ್ಲಿ ಮಾತ್ರವಲ್ಲದೆ ಶಿವಮೊಗ್ಗ, ದಾವಣಗೆರೆ, ಮಂಗಳೂರು, ಆಗುಂಬೆ, ಗುಲಬರ್ಗ, ಬೀದರ್‌ಗಳಲ್ಲಿ ಹಳೆಯ ವಿದ್ಯಾರ್ಥಿಗಳ ಸ್ವಇಚ್ಛೆಯಂತೆ ಕೇಂದ್ರೇತರ ಶಿಬಿರಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯದ ಅನೇಕ ಕಡೆ ಮಕ್ಕಳ ಶಿಬಿರಗಳು ನಡೆಯುತ್ತಿವೆ. ಪ್ರತಿ ಭಾನುವಾರ, ಕೇಂದ್ರದಲ್ಲಿ ಒಂದು ದಿನದ ಶಿಬಿರ ಹಾಗೂ ಬೆಂಗಳೂರಿನ ಬೇರೆಬೇರೆ ಸ್ಥಳಗಳಲ್ಲಿ ಮತ್ತು ರಾಜ್ಯದ ಇತರೆ ಸ್ಥಳಗಳಲ್ಲಿ ಸಾಮೂಹಿಕ ಸಾಧನೆಗಳು ನಡೆಯುತ್ತಿದ್ದು ಧರ್ಮ ಜ್ಯೋತಿಯು ಸಾರ್ವಜನಿಕರಲ್ಲಿ ಬೆಳಗುತ್ತಿದೆ.

ನಮ್ಮ ಧ್ಯಾನದ ಅಭ್ಯಾಸವನ್ನು ಬಲಗೊಳಿಸುತ್ತಾ ನಮ್ಮ ಕೇಂದ್ರವನ್ನು ಬೆಳೆಸಲು ನಮ್ಮಲ್ಲಿ ಪ್ರತಿಯೊಬ್ಬರೂ ನಾನಾ ವಿಧವಾಗಿ ಸೇವೆ ಸಲ್ಲಿಸಬಹುದು. ಕೇಂದ್ರದ ಮೂಲ ಸೌಕರ್ಯಗಳನ್ನು ಪೋಷಿಸಲು ನಿರಂತರವಾಗಿ ರಿಪೇರಿ ಮತ್ತು ಉಸ್ತುವಾರಿ ಕೆಲಸಗಳು ನಡೆಯಬೇಕಾಗಿದೆ. ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ಕೇಂದ್ರವು ಕೆಲಸ ಮಾಡುವ ನಿಟ್ಟಿನಲ್ಲಿ ಈಗಾಗಲೆ ಹಮ್ಮಿಕೊಂಡಿರುವ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮತ್ತು ಭವಿಷ್ಯದ ಯೋಜನೆಗಳನ್ನು ರೂಪಿಸುವುದು ತುರ್ತಿನ ಕೆಲಸವಾಗಿದೆ.ಇವೆಲ್ಲವೂ ಧರ್ಮ ಚಕ್ರವು ನಿರಂತರವಾಗಿ ಚಲಿಸಿ ನಮ್ಮ ಪಾರಮಿಗಳನ್ನು ಬೆಳೆಸಿಕೊಳ್ಳಲು ಒಂದು ಒಳ್ಳೆಯ ಅವಕಾಶವನ್ನು ಕಲ್ಪಿಸುತ್ತವೆ.ಈ ಎಲ್ಲ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಬೇಕಾದ ಸಂಪನ್ಮೂಲವನ್ನು ಹಳೆಯ ವಿಧ್ಯಾರ್ಥಿಗಳಿಂದ ಮಾತ್ರವೇ ಸ್ವೀಕರಿಸಲ್ಪಡುತ್ತದೆಯೆಂಬುದು ನಮಗೆಲ್ಲ ತಿಳಿದಿದೆ. ಇದು ಸರಿಯಾದ ಸಂಕಲ್ಪ ಇಟ್ಟುಕೊಳ್ಳಲು ಮತ್ತು ಧರ್ಮದ ಪರಿಶುದ್ಧತೆಯನ್ನು ಕಾಪಾಡಲು ಸಹಾಯ ಮಾಡುತ್ತದೆ.

ಕೇಂದ್ರವು ತಕ್ಷಣದಲ್ಲಿ ಕಾರ್ಯಗತ ಮಾಡಬೇಕಾಗಿರುವ ಎರಡು ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಂಡಿದೆ:

(ಅ) ಸಾಧಕರು ಕ್ಷೇಮವಾಗಿ ಕಷ್ಟವಿಲ್ಲದೆ ಓಡಾಡುವ ಕಾಲುಹಾದಿಗಳನ್ನು ಕೇಂದ್ರದ ಎಲ್ಲ ಕಡೆ ನಿರ್ಮಿಸುವುದು.

(ಆ) ಆದುನಿಕ ಮೂಲಸೌಕರ್ಯಗಳನ್ನು ಒಳಗೊಂಡ ಅಡಿಗೆ ಮನೆ ನಿರ್ಮಿಸುವುದು.

ಮೇಲ್ಕಂಡ ಯೋಜನೆಗಳನ್ನು ಕಾರ್ಯಗತಗೊಳಿಸಲು ತಗುಲಬಹುದಾದ ವೆಚ್ಚವು ದಿನಗಳು ಕಳೆದಂತೆ ಹೆಚ್ಚಾಗುತ್ತಾ ಹೋಗುತ್ತದೆ. ಅಧಿಕ ವೆಚ್ಚವನ್ನು ಉಳಿಸಲು ಯೋಜನೆಗಳನ್ನು ಶೀಘ್ರವಾಗಿ ಕಾರ್ಯಗತ ಮಾಡುವ ಅಗತ್ಯತೆ ಇರುತ್ತದೆ. ಮುಂದಿನ ದಿನಗಳಲ್ಲಿ ಮಹಿಳೆಯರಿಗಾಗಿ ಒಂದು ಕೊಠಡಿಯಲ್ಲಿ ಒಬ್ಬರೇ ಇರುವಂತಹ ನಿವಾಸಸ್ಥಾನಗಳು, ಶೂನ್ಯಗಾರ, ದೀರ್ಘಕಾಲದ ಧಮ್ಮ ಸೇವಕರಿಗೆ ವಾಸದ ಕೆಠಡಿಗಳು, ಆಡಳಿತ ಕಚೇರಿ ಮುಂತಾದ ಯೋಜನೆಗಳು ಕೇಂದ್ರದ ಸೌಲಭ್ಯಗಳ ಪಟ್ಟಿಗೆ ಸೇರಲಿವೆ.

ಸಾಧಕ/ಸಾಧಕಿಯರು ವೈಯುಕ್ತಿಕವಾಗಿ ಅಥವಾ ಜಂಟಿಯಾಗಿ, ಹಣದ ಅಥವಾ ವಸ್ತುವಿನ ರೂಪದಲ್ಲಾಗಲೀ ಈ ಯೋಜನೆಗಳನ್ನು ಬೆಂಬಲಿಸುವುದರ ಮೂಲಕ ಅಪಾರ ಪುಣ್ಯ ಸಂಪಾದಿಸುವ ಅವಕಾಶ ಹೊಂದಿದ್ದಾರೆ. ದಾನವು ಹೆಚ್ಚಾಗಲೀ ಕಡಿಮೆಯಾಗಲೀ ಇವುಗಳ ಮಹತ್ವದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ದಾನ ನೀಡಬೇಕೆಂಬ ಇಚ್ಛೆಯೇ ಬಹಳ ಮುಖ್ಯವಾದುದು. **ಬಹುಜನ ಹಿತಾಯ ಬಹುಜನ ಸುಖಾಯ** ಎಂಬ ಒಂದೇ ಒಂದು ಗುರಿಯನ್ನು ಇಟ್ಟುಕೊಂಡು ಅತ್ಯಂತ ಕರುಣೆಯಿಂದ ಈ ಅಮೂಲ್ಯ ಧಮ್ಮ ರತ್ನವನ್ನು ನಮಗೆ ನೀಡಿದ ನಮ್ಮ ಧಮ್ಮಪಿತ ಪೂಜ್ಯ ಗುರೂಜಿಯವರಿಗೆ ನಾವು ಸಲ್ಲಿಸುವ ಕನಿಷ್ಠ ಕೃತಜ್ಞತೆಯಾಗಿದೆ. ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಈ ಯೋಜನೆಗಳನ್ನು ಶೀಘ್ರಗತಿಯಲ್ಲಿ ಕಾರ್ಯಗತಗೊಳಿಸುವ ಕುರಿತು ನಿಮ್ಮಿಂದ ಯಾವುದೇ ಮಾಹಿತಿ ಮತ್ತು ಸಲಹೆಗಳಿಗೆ ಸ್ವಾಗತವಿದೆ ನಾವೆಲ್ಲರೂ ಧರ್ಮದಲ್ಲಿ ನಡೆಯುತ್ತಾ ನಮ್ಮ ಅಂತಿಮ ಲಕ್ಷ್ಯದ ಕಡೆ ಪ್ರಗತಿ ಸಾದಿಸುತ್ತಾ ಇರೋಣ!

ಅನಂತ ಮೈತ್ರಿ ಮತ್ತು ಕೃತಜ್ಞತೆಗಳೊಂದಿಗೆ
ಶ್ರೀಮತಿ ಜಯ ಸಂಗೋಯಿ
ಕೇಂದ್ರದ ಆಚಾರ್ಯರು, ಧಮ್ಮ ಪಪುಲ್ಲ, ಬೆಂಗಳೂರು
ಮೋ9980217750.ಇಮೇಲ್ jayasangoi@gmail.com

## ವಾರ್ಷಿಕ ಸಭೆ : ಧಮ್ಮಗಿರಿ, ಭಾರತ.

ಮಾರ್ಚ್ 1, 1988, ಉದ್ಘಾಟನಾ ಭಾಷಣ

ಧಮ್ಮ ಪಥದ ಜೊತೆಗಾರರೇ,

ದುಃಖಿತರಾದ ಬಹಳ ಜನಗಳು ಧಮ್ಮದ ಸಂಪರ್ಕಕ್ಕೆ ಬರಲು ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವೆಲ್ಲರು ಪುನಃ ಇಲ್ಲಿ ಒಟ್ಟಿಗೆ ಸೇರಿದ್ದೇವೆ. ವಿಪಶ್ಯನದ ಕೆಲಸ ಹೆಚ್ಚಾದಂತೆ, ಹೆಚ್ಚು ಸಹಾಯಕ ಆಚಾರ್ಯರನ್ನು ನೇಮಿಸಲಾಯಿತು. ಹೆಚ್ಚು ಧ್ಯಾನ ಕೇಂದ್ರಗಳನ್ನು ಸ್ಥಾಪಿಸಲಾಯಿತು.ಧಮ್ಮದ ಪ್ರಸಾರಕ್ಕಾಗಿ ಹೆಚ್ಚು ಹೆಚ್ಚು ಸೇವಾಕರ್ತರು ತಮ್ಮ ಸೇವಯನ್ನು ಕೊಡುತ್ತಿದ್ದಾರೆ. ಈ ಬೆಳವಣಿಗೆಯು ಖಂಡಿತವಾಗಿ ಮುಂದುವರಿಯುತ್ತದೆ ಹಾಗು ಧಮ್ಮವನ್ನು ದುರ್ಬಲಗೊಳಿಸುವ ಪ್ರವೃತ್ತಿಗಳನ್ನು ತಪ್ಪಿಸಲು ವಿಪಶ್ಯನದ ಕೆಲಸವನ್ನು ಸುಸಂಘಟಿತಗೊಳಿಸುವುದು ಬಹಳ ಅವಶ್ಯಕ.

ಧಮ್ಮದ ಬೆಳವಣಿಗೆಯ ಈ ಸಮಯದಲ್ಲಿ ನಾವು ಕೊಡ ರಸ್ತೆಯಲ್ಲಿದ್ದೇವೆ ಏಕೆಂದರೆ ಧಮ್ಮವು ಸಂಘಟಿತ ಮತಧರ್ಮವಾಗಿ ತಿರುಗುವ ಅಪಾಯವಿದೆ,ಮತ್ತು ಆಗ ಅದು ಮಾನವ ಜನಾಂಗಕ್ಕೆ ಸಹಾಯ ಮಾಡುವ ಬದಲು ಹಾನಿ ಮಾಡುತ್ತದೆ.ಒಂದು ಸಲ ಅದು ಒಂದು ಪಂಥವಾಯಿತೆಂದರೆ,ಧಮ್ಮದ ಸಾರಸತ್ವ ಹೊರಟು ಹೋಗುತ್ತದೆ. ಇದು ಒಂದು ಸೂಕ್ಷ್ಮ ಪರಿಸ್ಥಿತಿ. ಒಂದು ಕಡೆ, ಒಂದು ರೀತಿಯ ಶಿಸ್ತನ್ನು ಕಾಪಾಡಿಕೊಳ್ಳಲೇಬೇಕು; ಮತ್ತೊಂದು ಕಡೆ, ಪ್ರತಿಯೊಬ್ಬರೂ ಬಿಗಿ ಆಡಳಿತದ ನಿಯಮಗಳಲ್ಲಿ ಕೆಲಸ ಮಾಡುತ್ತಾ ಅದು ಶ್ರೇಣೀಕೃತ ವ್ಯವಸ್ಥೆಯಾಗಿ ಪರಿವರ್ತನೆಯಾದರೆ,ಒಂದು ಪಂಥ ಸ್ಥಾಪಿತಗೊಳ್ಳುತ್ತದೆ. ಅಹಂಗಳು ಪ್ರಧಾನವಾದಾಗ, ಸಂಸ್ಥೆಯಲ್ಲಿ ಒಬ್ಬ ವ್ಯಕ್ತಿಯ ಸ್ಥಾನ ಮಾನವೇ

ಪ್ರಮುಖವಾದಾಗ, ಪಂಥಗಳು ಹುಟ್ಟಿಕೊಳ್ಳುತ್ತವೆ. ಯಾರಾದರೂ ಮನೆಯ ಸೌಲತ್ತುಗಳನ್ನು ವ್ಯವಹಾರವನ್ನು ಮತ್ತು ಕುಟುಂಬದ ಸಮಯವನ್ನು ಧಮ್ಮಕ್ಕಾಗಿ ತ್ಯಾಗ ಮಾಡಿ, ತನ್ನ ಸೇವೆಗಾಗಿ ಪ್ರಶಂಸೆಯನ್ನು, ನಿರೀಕ್ಷಿಸುವುದು ಹುಚ್ಚುತನವಾಗುತ್ತದೆ, ಇಂಥಕಡೆಗಳಲ್ಲಿಯೇ ವ್ಯಕ್ತಿಪೂಜೆ ಮತ್ತು ಪಂಥೀಯತೆ ಪ್ರಾರಂಭವಾಗುತ್ತದೆ. ಬಹು ಜನರ ಹಿತಕ್ಕಾಗಿ, ನಿಸ್ವಾರ್ಥ ಸೇವೆ ಮುಖ್ಯ, ಧಮ್ಮ ಮುಖ್ಯ, ಮತ್ತೇನೂ ಅಲ್ಲ.ಯಾರನ್ನಾದರು ಏನನ್ನಾದರು ಮಾಡಲು ಕೇಳಿದಾಗ ಅಥವಾ ಕೇಳದೇ ಇದ್ದಾಗ,ಆ ವ್ಯಕ್ತಿ ಸಂತೋಷಪಡಬೇಕು.

ನಾನು ನಿಸ್ವಾರ್ಥತೆಯಿಂದ ಕೆಲಸ ಮಾಡುತ್ತಿದ್ದೇನೆ ಎಂದು ಯಾರಾದರೂ ಹೇಳಬಹುದು, ಆದರೆ ವ್ಯಕ್ತಿ ಮಾತ್ರ ಇದನ್ನು ತೀರ್ಮಾನಿಸಬಹುದು. ಬ್ರಹ್ಮವಿಹಾರಗಳಲ್ಲಿ ಎರಡು ಬ್ರಹ್ಮವಿಹಾರಗಳಾದ, ***ಮುದಿತ*** (ಸಹಾನುಭೂತಿಯ ಸಂತೋಷ) ಮತ್ತು ***ಕರುಣಾ*** (ಕರುಣೆ). ಇದಕ್ಕಾಗಿಯೇ ಇವೆ. ವ್ಯಕ್ತಿಯು ನಿಜವಾಗಿಯೂ ಧಮ್ಮದಲ್ಲಿ ಬೆಳೆಯುತ್ತಿದ್ದಾನೆಯೇ ಎಂದು ನಿರ್ಧರಿಸಲು ಅವು ಅಳತೆಗೋಲುಗಳಾಗಿವೆ. ತನ್ನ ಸಹಸೇವಾಕರ್ತನ ಸೇವೆ ಬಹಳ ಮೆಚ್ಚುಗೆ ಪಡೆದಿರುವುದನ್ನು ಕಂಡು ಹೊಟ್ಟೆಕಿಚ್ಚು ಅಥವಾ ದ್ವೇಷದ ಭಾವನೆಯನ್ನು ವ್ಯಕ್ತಿಯು ಹೊಂದಿದ್ದರೆ, ಆಗ ಆ ವ್ಯಕ್ತಿ ಧಮ್ಮವನ್ನು ಅರ್ಥಮಾಡಿಕೊಂಡಿಲ್ಲ.ಸಹಾನುಭೂತಿಯ ಸಂತೋಷವಿದ್ದರೆ, ವ್ಯಕ್ತಿಯು ಧಮ್ಮದಲ್ಲಿ ಮುಂದುವರಿಯುತ್ತಿದ್ದಾನೆ.

ಸಹಸೇವಾಕರ್ತ ತಪ್ಪು ಮಾಡುಬಹುದು ಅಥವಾ ವ್ಯಕ್ತಿಯು ಅದನ್ನು ತಪ್ಪು ಎಂದು ಗ್ರಹಿಸಿದ್ದಾನೆ. ತಪ್ಪು ಮಾಡಿರುವ ಈ ವ್ಯಕ್ತಿಯ ಬಗ್ಗೆ ವೈಮನಸ್ಸು ಅಥವಾ ದ್ವೇಷ ಬೆಳೆಸಿಕೊಂಡರೆ ಆ ವ್ಯಕ್ತಿ ಧಮ್ಮದಿಂದ ಬಹಳ ದೂರವೇ ಇದ್ದಾನೆ ಎಂದರ್ಥ. ಆದರೆ, ತಪ್ಪು ಮಾಡಿರುವ ವ್ಯಕ್ತಿಗೆ ಸಹಾಯ ಮಾಡುವ ಪ್ರೇರಣೆ ಹೊಂದಿದ್ದರೆ, ಆಗ ***ಕರುಣಾ*** ಬೆಳೆಯುತ್ತದೆ. ತಪ್ಪು ಮಾಡಿರುವ ವ್ಯಕ್ತಿಯ ಬಗ್ಗೆ ನನಗೆ ದ್ವೇಷವಿಲ್ಲ ಎಂದು ಯಾರಾದರೂ ಹೇಳಬಹುದು. ಆದರೆ ಆ ವ್ಯಕ್ತಿಯ ಪತನದ ಬಗ್ಗೆ ಸಂತೋಷಪಟ್ಟರೆ, ಅವರು ಧರ್ಮದಿಂದ ಬಹಳ ದೂರವಿದ್ದಂತೆಯೇ. ನಿಮ್ಮನ್ನು ನೀವೇ ಬಹಳ ಎಚ್ಚರಿಕೆಯಿಂದ ಪರೀಕ್ಷಿಸಿಕೊಳ್ಳುತ್ತಿರಿ, ಏಕೆಂದರೆ ಬೇರೆ ಯಾರೂ ಇದನ್ನು ನಿಮಗಾಗಿ ಮಾಡಲು ಸಾಧ್ಯವಿಲ್ಲ.

ಮೊದಲು ನಿಮ್ಮನ್ನು ನೀವು ಧಮ್ಮದಲ್ಲಿ ಪ್ರತಿಷ್ಠಾಪಿಸಿಕೊಳ್ಳಿ. ಆಗ ನೀವು ಇತರರಿಗೆ ಸರಿಯಾಗಿ ಸೇವೆ ಮಾಡಬಹುದು. **"ನಾನು"** ಎಂಬ ಈ ಹುಚ್ಚಿಗಿಂತ ಧಮ್ಮ ಮುಖ್ಯವಾದರೆ, ಅಹಂ ಖಂಡಿತವಾಗಿ ಕರಗುತ್ತಾ ಹೋಗುತ್ತದೆ. ಆದರೆ ಧಮ್ಮ ಸೇವೆಯ ಹೆಸರಿನಲ್ಲಿ ತನ್ನ ಅಹಂನ್ನು ಪ್ರದರ್ಶಿಸಲು ಹವಣಿಸಿದರೆ, ಆ ಸೇವೆಯಿಂದ ಯಾರೂ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಎಷ್ಟು ಅಹಂ ಕಡಿಮೆಯೊಗುತ್ತಿದೆಎಂಬುದನ್ನು ವ್ಯಕ್ತಿಯು ಪರೀಕ್ಷಿಸಿಕೊಳ್ಳುತ್ತಿದ್ದರೆ, ಆ ವ್ಯಕ್ತಿ ಸಂಸ್ಥೆಯ ಸೇವೆ ಮಾಡಲು ಯೋಗ್ಯನಾಗುತ್ತಾನೆ,

ಧಮ್ಮ ಪ್ರಸಾರದಲ್ಲಿ ತೊಡಗಿರುವವರೆಲ್ಲರಿಗೂ ಶಿಸ್ತು ಸಂಹಿತೆಯನ್ನು ರೂಪಿಸುವ ಬಹಳ ಮುಖ್ಯವಾದ ಕೆಲಸವನ್ನು ಮುಂದಿನ ಕೆಲವು ದಿನಗಳಲ್ಲಿ ಮಾಡಲಾಗುತ್ತದೆ. ಅಂತಹ ಕೆಲಸದಲ್ಲಿ ವ್ಯಕ್ತಿಯು ಮುಖ್ಯವಾಗುವುದಿಲ್ಲ; ಏಕೆಂದರೆ ವ್ಯಕ್ತಿಗಳು ಬರಬಹುದು ಮತ್ತು ಹೋಗಬಹುದು. ಜನಗಳಿಗೆ ಸರಿಯಾದ ಸೇವೆ ಮಾಡುವ ನಿಮ್ಮ ಎಲ್ಲಾ ತೀರ್ಮಾನಗಳಲ್ಲಿ ಧಮ್ಮವು ಬಹಳ ಮುಖ್ಯವಾಗಬೇಕು.

ಒಂದೇ ಗುರಿ, **ಬಹುಜನಹಿತಾಯ, ಬಹುಜನ ಸುಖಾಯ,** ಹೆಚ್ಚು ಹೆಚ್ಚು ಜನರು ಧಮ್ಮದಿಂದ ಪ್ರಯೋಜನ ಪಡೆಯಲಿ, ಅವರ ದುಃಖದಿಂದ ಹೊರಬರಲಿ ಮತ್ತು ನಿಜವಾದ ಶಾಂತಿ ಮತ್ತು ಸಾಮರಸ್ಯವನ್ನು ಅನುಭವಿಸಲಿ. ನಾನು ಉಜ್ವಲ ಭವಿಷ್ಯವನ್ನು ನೋಡುತ್ತೇನೆ. ಧಮ್ಮದ ಪ್ರಕಾಶದಲ್ಲಿ ನೀವೆಲ್ಲಾ ಬೆಳಗಿರಿ, ನಿಮ್ಮನ್ನು ನೋಡಿ ಜನಗಳು ಧಮ್ಮದ ಕಡೆ ಆಕರ್ಷಿತರಾಗಲಿ. ಎಲ್ಲಾ ಕಡೆಯ ದುಃಖಿತ ಜನಗಳಿಗಾಗಿ ಧಮ್ಮದಲ್ಲಿ ಕೆಲಸ ಮಾಡುತ್ತಿರುವ ನಿಮ್ಮೆಲ್ಲರಿಗೂ ಸಫಲತೆ ಸಿಗಲಿ.

***ಭವತು ಸಬ್ಬ ಮಂಗಳಂ***

ಎಲ್ಲರಿಗೂ ಮಂಗಳವಾಗಲಿ,

**ಎಸ್.ಎನ್,ಗೋಯಂಕ**

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು:** ಫೆಬ್ರವರಿ 3–14, 17–28; ಮಾರ್ಚ್ 2–13, 16–27 ಏಪ್ರಿಲ್ 13–24, ಮೇ 4–15; ಜೂನ್ 1–12, 15–26, 29– ಜುಲೈ10, 13–24, ಆಗಸ್ಟ್ 5–14, 17–28. ಸೆಪ್ಟೆಂಬರ್ 7–16, ಅಕ್ಟೋಬರ್ 4– 15, 18–29, **ಮೂರು ದಿನದ ಶಿಬಿರ:** ಡಿಸೆಂಬರ್ 24 ರಿಂದ 27, ಜನವರಿ, 28–31, ಏಪ್ರಿಲ್ 28ರಿಂದ ಮೇ 1, ಜುಲೈ 28–31, ಸೆಪ್ಟೆಂಬರ್ 1–4. **ಸತಿಪಟ್ಠಾನ ಶಿಬಿರಗಳು:** ಮಾರ್ಚ್ 30ರಿಂದ ಏಪ್ರಿಲ್ 7, ಸೆಪ್ಟೆಂಬರ್ 21–29, ನವೆಂಬರ್ 13–21. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ದೂ.: 080–23712377, ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org; website: www.dhamma.org.

**10 ದಿನದ ಶಿಬಿರ ಆಯೋಜಿಸುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**10ದಿನದ ಶಿಬಿರದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಹಾಯಕ್ಕಾಗಿ ಸಂಪರ್ಕಿಸಿ.** ಬಳ್ಳಾರಿ: ಎ.ಮಲ್ಲಿಕಾರ್ಜುನಪ್ಪ, ಮೊ.ಸಂ. 9449511217. ಬೆಳಗಾವಿ: ವೀರಣ್ಣಗೌಡ ವಿ.ಸರ್‌ನಾಡಗೌಡ್ರ, ಮೊ.ಸಂ.9902657335. ದಾವಣಗೆರೆ: ಉದಯ ಶಿವಕುಮಾರ್, ಮೊ.ಸಂ. 9739314581(ಮೆಸೇಜ್ ಮಾಡಿ, ಅವರೇ ಕರೆ ಮಾಡುತ್ತಾರೆ.) ಜಿ.ಟಿ.ಗೋವಿಂದಪ್ಪ, ಮೊ.ಸಂ.9448588789.

**ವಂತಿಗೆ : ವಾರ್ಷಿಕ: ರೂ. 30, ಆಜೀವ: ರೂ. 500. ಚೆಕ್ ಅಥವಾ ಡಿ.ಡಿ. ಪಡೆಯಬೇಕಾದ ಹೆಸರು : 'ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ'. ಪಾವತಿಸುವ ಸ್ಥಳ: ಬೆಂಗಳೂರು. ಬ್ಯಾಂಕ್ : ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಚೆಕ್ ಅಥವಾ ಡಿಡಿಯ ಜೊತೆಗೆ ಸ್ವ ವಿಳಾಸದ ಚೀಟಿ ಇಡಿ**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

ತೆರೆದ–ಅಂಚೆ

**ಮುದ್ರಿತ ವಿಷಯ**

ಗೆ,

ಇಂದ:

**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.